ಮಾತನಾಡುವ ಕ್ಷೇತ್ರ 2 ಸಾಮರ್ಥ್ಯ [ಏಕಲವ್ಯ, ಸಂತಮ್ಮಣ್ಣ]

ಬರೆಯುವ ಕ್ಷೇತ್ರದ 2 ಸಾಮರ್ಥ್ಯ[ಏಕಲವ್ಯ, ಅಜ್ಜಿಯ ಜಂಬ]

ಕ್ರ.ಸಂ	**ಕ್ಷೇತ್ರಗಳು**	**ಮೌಲ್ಯಮಾಪನ ಅಂಶಗಳು**	**ಒಂದು ವಿದ್ಯಾರ್ಥಿ ಪಡೆದ ಅಂಶಗಳು**	**ಶೇ 15ಕ್ಕೆ**	**ಶ್ರೇಣಿ**
1	ಆಲಿಸುವುದು	20	12	9	B+
2	ಮಾತನಾಡುವುದು	10	8	12	A
3	ಬರೆಯುವುದು	5	3	9	B+

ಒಟ್ಟಾರೆ ಶ್ರೇಣಿ:– 9+12+9=30/35= ಇದನ್ನು ಶೇ. 15ಕ್ಕೆ ಪರಿವರ್ತಿಸಿದಾಗ 12.8 ಬರುತ್ತದೆ ಇದನ್ನು ಶ್ರೇಣಿಗೆ ಪರಿವರ್ತಿಸಿದಾಗ B+ ಬರುತ್ತದೆ. ಇದೇ ರೀತಿ ಗಣಿತ ಮತ್ತು ಪರಿಸರ ಅಧ್ಯಯನದ ಶ್ರೇಣಿಯನ್ನು ನಮೂದಿಸಬಹುದು.

- ಸಹ ಪಠ್ಯ ಚಟುವಟಿಕೆಗಳಲ್ಲಿನ ಅವಲೋಕನ ತಪಶೀಲನ್ನು ಒಂದು ಸೆಮಿಸ್ಟರ್‌ನಲ್ಲಿ ಕನಿಷ್ಠ ಮೂರು ಬಾರಿ ನಮೂದಿಸಿ ಹೆಚ್ಚು ಪುನರಾವರ್ತನೆಗೊಂಡ ಅಂಶವನ್ನು ಪರಿಗಣಿಸಿ ನೇರವಾಗಿ ಶ್ರೇಣಿಗೊಳಿಸಬಹುದು.

* **ದಾಖಲೆಗಳ್ನು ನಿರ್ವಹಿಸಲು ಸೂಚನೆಗಳು**

- ತರಗತಿಯಲ್ಲಿ ಮಕ್ಕಳಿಗೆ ಯಾವುದಾದರೊಂದು ಪರಿಕಲ್ಪನೆ ಮೂಡಿಸಲು (ಘಟಕದ ವಿಷಯ ಕಲಿಸಲು) ಸೂಕ್ತ ಚಟುವಟಿಕೆಯನ್ನು ಆಯ್ಕೆ ಮಾಡಿಕೊಂಡು, ಅನುಕೂಲಿಸಿ ನಂತರ ಇದರ ಮೌಲ್ಯಮಾಪನವನ್ನು ಮಾಡಲು ಅನುಕೂಲವಾದ ಸಾಧನಗಳನ್ನು ಗುರ್ತಿಸಿಕೊಳ್ಳಿ. (ಉದಾಹರಣೆಗಾಗಿ ಕೆಲವು ಸಾಧನಗಳನ್ನು ಅನುಬಂಧ 7ರಲ್ಲಿ ನೀಡಿದೆ.)

ಉದಾ:– ಗುಂಪು ಚರ್ಚೆ ವಿಧಾನವನ್ನು ಅಳವಡಿಸಿಕೊಂಡಾಗ ಗುಂಪು ಚರ್ಚೆಯ ತಪಶೀಲು ಪಟ್ಟಿಯನ್ನು ಬಳಸಿ.

- ಈ ಗುಂಪು ಚರ್ಚೆಯ ತಪಶೀಲು ಪಟ್ಟಿಯಲ್ಲಿ ಗುಂಪು ಚರ್ಚೆಯ ಸ್ವರೂಪದ ಪ್ರಶ್ನೆಗಳನ್ನು ಉದಾಹರಣೆಯಾಗಿ ನೀಡಿದೆ. ಆದರೆ ಯಾವ ವಿಷಯದ ಯಾವ ಪರಿಕಲ್ಪನೆಗೆ ತಾವು ಗುಂಪು ಚರ್ಚೆ ಹಮ್ಮಿಕೊಳ್ಳುತ್ತೀರೋ, ಆ ಪರಿಕಲ್ಪನೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ತಾವೇ ರೂಪಿಸಿ. ಪರಿಕಲ್ಪನೆಗೆ ಸಂಬಂಧಿಸಿದ ರೂಬ್ರಿಕ್ಸ್ ಬರೆಯಲು ಸ್ಥಳಾವಕಾಶ ನೀಡಿದೆ.

ಉದಾ:–

		ಹೌದು / ಇಲ್ಲ
1	ಗುಂಪು ಚರ್ಚೆಯಲ್ಲಿನ ಮಗುವಿಗೆ ಸನ್ನಿವೇಶದ ಬಗ್ಗೆ ಜ್ಞಾನವಿದೆಯೇ?	
2	ಸನ್ನಿವೇಶವನ್ನು ಅರ್ಥೈಸಿಕೊಳ್ಳುವ ಕೌಶಲವಿದೆಯೇ?	
3	ಸನ್ನಿವೇಶಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಹಾರಗಳು ತಿಳಿಸಿದೆಯೇ?	
4	ಮಗುವಿಗೆ ನಾಯಕತ್ವ ಗುಣಗಳಿವೆಯೇ?	
5		
6		
7		
8		
9		
10		

ಖಾಲಿ ಬಿಟ್ಟಿರುವ ಸಾಲುಗಳಲ್ಲಿ ಘಟಕದ ಜ್ಞಾನಾತ್ಮಕ ಅಂಶಗಳಿಗೆ ಸಂಬಂಧಿಸಿದ ರೂಬ್ರಿಕ್ಸ್‌ಗಳನ್ನು (ಸೂಚ್ಯಾಂಕ) ರೂಪಿಸಿಕೊಳ್ಳಿ. ಇವುಗಳು ಯಾರು? ಯಾವಾಗ? ಎಲ್ಲಿ? ಎಂಬ ವಾಕ್ಯಗಳ ಬದಲಾಗಿ ವಿಷಯದ ಪ್ರಾಧಾನ್ಯತೆ, ವಿಮರ್ಶಾತ್ಮಕ ಚಿಂತನೆ ಅಥವಾ ಅನ್ವಯಕ್ಕೆ ಅವಕಾಶ ನೀಡುವಂತೆ ರೂಬ್ರಿಕ್ಸ್‌ಗಳು ಇರಲಿ. ಈ ರೀತಿಯ ಒಂದು ಸಾಧನವನ್ನು ಸಿದ್ಧಪಡಿಸಿಕೊಂಡು, ಇದರ ನೆರವಿನಿಂದ ಪ್ರತಿ ಮಗುವಿನ ನಮೂದನ್ನು ಮಕ್ಕಳ ವೈಯಕ್ತಿಕ ದಾಖಲೆಯಲ್ಲಿ ನಮೂದಿಸಿ. ಪ್ರತಿ ಮಗುವಿಗೂ ಸಾಧನ ಸಿದ್ಧಪಡಿಸಿಕೊಳ್ಳುವ ಅವಶ್ಯಕತೆಯಿಲ್ಲ.

> ಗಮನಿಸಿ:– ಉದಾಹರಣೆಯಾಗಿ 10 ಅಂಶಗಳು ನೀಡಿದೆ. ತಾವು 10ಕ್ಕೆ ಬದಲಾಗಿ 7,8,6... ಅಂಶಗಳನ್ನೇ ರೂಪಿಸಿಕೊಳ್ಳಬಹುದು. ನಿಮ್ಮ ಚಟುವಟಿಕೆ ಅನುಗುಣವಾಗಿ ಹಾಗೂ ಮೌಲ್ಯಮಾಪನದ ಉದ್ದೇಶಗಳಿಗನುಗುಣವಾಗಿ ಅಂಶಗಳ ಸಂಖ್ಯೆ ಇರಬಹುದು.

* ಇದೇ ಸಾಧನವನ್ನು ಬಳಸಿ ಮಗು ಪಡೆದಿರುವ ಅಂಶಗಳ ಆಧಾರದ ಮೇಲೆ ದರ್ಜಾ ಮಾಪನದಲ್ಲಿಯೂ ಮಕ್ಕಳ ಸಾಧನೆಯನ್ನು ಗುರ್ತಿಸಬಹುದು.

ಕ್ರ.ಸಂ.	ವಿದ್ಯಾರ್ಥಿಯ ಹೆಸರು	ಘಟಕ ಚ: ಯೋಜನಾ ವಿಧಾನ										ಒಟ್ಟು	ದ.ಮಾ. ಶ್ರೇಣಿ
		1	2	3	4	5	6	7	8	9	10		
1.	ಶಂಕರ	✔	✔	✔	✔	✔	✔	✔	-	-	-	7	3
2.	ಪೂಜಾಶ್ರೀ	✔	.	✔	·	✔	·	✔	-	-	-	4	2
3.	ಸುಗುಣ	✔	✔	·	·	·	·	·	-	-	-	2	1

ಈ ಮೇಲಿನ ಉದಾಹರಣೆಯನ್ನು ಗಮನಿಸಿ ಮಗುವಿನ ಸಾಧನೆ ಅಳೆಯಲು 3 ಬಿಂದುಗಳ ದರ್ಜಾಮಾಪನಿಯನ್ನು (3 Point Scale) ಬಳಸಲಾಗಿದೆ. ಈ 3 ಬಿಂದುಗಳು ಅರ್ಥಾತ್ ಅತಿ ಹೆಚ್ಚು ಸರಿಗುರುತುಗಳು – 3, ಹೆಚ್ಚು ಸರಿಗುರುತುಗಳು – 2, ಹಾಗೂ ಕಡಿಮೆ ಸರಿಗುರುತುಗಳು – 1 ಎಂದು ವರ್ಗೀಕರಿಸಲ್ಪಡುತ್ತದೆ. ಒಬ್ಬ ವಿದ್ಯಾರ್ಥಿ ದರ್ಜಾ ಮಾಪನಿಯಲ್ಲಿ 3ರ ಬಿಂದುವಿನ ವರ್ಗದಲ್ಲಿ ಬಂದರೆ, ಅವನು ಪರಿಕಲ್ಪನೆಯನ್ನು ಅರ್ಥೈಸಿಕೊಂಡು ಅನ್ವಯ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದಾನೆ ಎಂದರ್ಥ. 2 ಬಂದಿದ್ದರೆ ವಿದ್ಯಾರ್ಥಿಗೆ ಪರಿಕಲ್ಪನೆ ಅರ್ಥವಾಗಿದೆ ಎಂದರ್ಥ. ಹಾಗೆಯೇ 1 ಬಂದಿದ್ದರೆ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವಲ್ಲಿ ಇನ್ನೂ ಗೊಂದಲವಿದೆ ಎಂದು ಪರಿಗಣಿಸಬೇಕಾಗುತ್ತದೆ.

* **ದರ್ಜಾಮಾಪನದ ಶ್ರೇಣಿ ಬಿಂದು ವರ್ಗೀಕರಣದಿಂದ ಆಗುವ ಉಪಯೋಗಗಳು.**

  - ➢ ಮಕ್ಕಳನ್ನು ಗುಂಪುಗಳಾಗಿ ವರ್ಗೀಕರಿಸಬಹುದು.
  - ➢ ಮಕ್ಕಳನ್ನು ವೈಯಕ್ತಿಕವಾಗಿ ಗುರ್ತಿಸಬಹುದು, ವಿಶ್ಲೇಷಿಸಬಹುದು.
  - ➢ ಯಾವ ಗುಂಪಿಗೆ ಹೆಚ್ಚಿನ ಆದ್ಯತೆ ಮತ್ತು ಪುನರ್ಬಲನ ಚಟುವಟಿಕೆ ನೀಡಬೇಕೆಂಬುದನ್ನು ನಿಖರವಾಗಿ ಗುರ್ತಿಸಬಹುದು.
  - ➢ ಸಣ್ಣ ಗುಂಪು ದೊರೆಯುವುದರಿಂದ ವೈಯಕ್ತಿಕ ಪ್ರೋತ್ಸಾಹ ಗಮನ ನೀಡಬಹುದು.

ನಿಮ್ಮ ಗಮನಕ್ಕೆ :– ಎಲ್ಲಾ ಘಟಕಗಳಿಗೆ ತಾಳೆಪಟ್ಟಿ/ಅವಲೋಕನ ತಪಶೀಲು ಬಳಸಬೇಕೆಂದು ಇಲ್ಲ. ಹಾಗೆಯೇ ಒಮ್ಮೆ ಬಳಸಿದ ಸಾಧನವನ್ನು ಮತ್ತೆ ಬಳಸುವಂತಿಲ್ಲ ಎಂಬುದಾಗಿಯೂ ಇಲ್ಲ. ನಮ್ಮ ಮೌಲ್ಯಮಾಪನ ಹಾಗೂ ರಚನಾವಾದದ ಹಿನ್ನೆಲೆಯಲ್ಲಿ ಕೈಗೊಳ್ಳುವ ಚಟುವಟಿಕೆಗಳಿಗೆ ಅನುಗುಣವಾಗಿ ಸಾಧನಗಳನ್ನು ಬಳಸಬಹುದು ಮತ್ತು ಮನರ್ಬಳಕೆ ಮಾಡಲೂಬಹುದು.

ಅಧ್ಯಾಯ 4

ತರಗತಿಗಳಲ್ಲಿ ಸಿ ಸಿ ಇ ಅನುಷ್ಠಾನ ಸಾಧನ ಮತ್ತು ತಂತ್ರಗಳ ವಿವರ

ಈಗಾಗಲೇ 'ನಿರಂತರ' ಹಾಗೂ 'ಸಾಧನ' ಸಾಹಿತ್ಯದಲ್ಲಿ ಸಾಧನ ಮತ್ತು ತಂತ್ರಗಳನ್ನು ವಿಷಯವಾರು ದೀರ್ಘವಾಗಿ ಚರ್ಚಿಸಿ, ಉದಾಹರಣೆಗಳನ್ನು ನೀಡಿದೆ. ಅವುಗಳನ್ನು ಪುನಃ ಅವಲೋಕಿಸಿ. ತರಗತಿವಾರು ಮತ್ತು ವಿಷಯವಾರು ಕಲಿಯಲು ಮತ್ತು ಕಲಿಕೆಯನ್ನು ಮೌಲ್ಯಮಾಪನ ಮಾಡಲು ಅನುಸರಿಸಬಹುದಾದ ಚಟುವಟಿಕೆ ಮತ್ತು ಸಾಧನಗಳ ಕೆಲವು ಉದಾಹರಣೆಗಳನ್ನು ನೀಡಿದೆ. ಇವುಗಳ ಜೊತೆಗೆ ಪ್ರಸ್ತುತ ಸಾಹಿತ್ಯದಲ್ಲಿ ಕೆ ಡಬ್ಲ್ಯು ಎಲ್ ನಕ್ಷೆ ಎಂಬ ಹೊಸ ತಂತ್ರವನ್ನು ಶಿಕ್ಷಕರ ಹೆಚ್ಚಿನ ಮಾಹಿತಿಗೆ ಪರಿಚಯಿಸುತ್ತಿದ್ದು ಅಗತ್ಯವಿದ್ದರೆ ತಾವು ಬಳಸಿಕೊಳ್ಳಬಹುದು.

ಕೆ.ಡಬ್ಲೂ.ಎಲ್. ನಕ್ಷೆ

KWL is Knows, Wants to know and Learnt. ಎಂದರೆ ತಿಳಿದ, ತಿಳಿಯಬೇಕಾದ ಮತ್ತು ಕಲಿತ ನಕ್ಷೆ ಎನ್ನಬಹುದು. ಉದಾಹರಣೆಯೊಂದಿಗೆ ವಿವರಿಸುವುದಾದರೆ ದಿನಸಿ ಅಂಗಡಿಗೆ ನಾವು ತೆರಳುವ ಮುನ್ನ ದಿನಸಿ ಚೀಟಿಯನ್ನು ಮಾಡಿಕೊಳ್ಳುತ್ತೇವೆ, ಇದು ನಮಗೆ ಬೇಕಾದ–ತಿಳಿದ ದಿನಸಿ ವಸ್ತುಗಳ ವಿವರ. ನಂತರ ದಿನಸಿ ಅಂಗಡಿಯವರು ನಮ್ಮ ಪಟ್ಟಿಯನ್ನು ಅವರ ಪಟ್ಟಿಯಾಗಿಸಿಕೊಳ್ಳುತ್ತಾರೆ. ಕೊನೆಗೆ ಎಲ್ಲಾ ಸಾಮಾನು ನೀಡಿದ್ದನ್ನು ಟಿಕ್ ಮಾಡಿಕೊಳ್ಳುತ್ತಾರೆ. ಹೀಗೆಯೇ ನಾಳೆ ನಡೆಯುವ ಪಾಠ / ಚರ್ಚೆಗಾಗಿ ಶಿಕ್ಷಕರು ಮಕ್ಕಳಿಂದ ಪ್ರಶ್ನೆಗಳು/ಚರ್ಚಾಂಶಗಳನ್ನು ಪಟ್ಟಿ ಮಾಡಿಕೊಂಡು ಬರಲು ತಿಳಿಸುತ್ತಾರೆ. ನಂತರ ಕಲಿಕಾ ಚಟುವಟಿಕೆ ನಡೆಯುತ್ತದೆ. ಕೊನೆಗೆ ತಾವು ಕೈಗೊಂಡ ಚರ್ಚೆಯಲ್ಲಿ ಹಾಕಿಕೊಂಡ ಪ್ರಶ್ನೆಗಳೆಲ್ಲಾ ಪೂರ್ಣವಾಯಿತೇ ಎಂದು ಶಿಕ್ಷಕರೂ ಮತ್ತು ಮಕ್ಕಳು ಕೂಡಿ ಪರೀಕ್ಷಿಸುತ್ತಾರೆ. ಈ ಪ್ರಶ್ನೆಗಳು ಸಾಕಷ್ಟು ಚಲನಶೀಲವಾಗಿರುತ್ತವೆ (ಡೈನಾಮಿಕ್).

ಕೆ.ಡಬ್ಲೂ.ಎಲ್. ನಕ್ಷೆ ಈ ರೀತಿ ಇರಬಹುದು.

ಪಾಠದ ಹೆಸರು

ನನಗೆ ತಿಳಿದಿರುವುದು	ತಿಳಿಯ ಬಯಸುವುದು	ನಾನು ತಿಳಿದಿದ್ದು

ಸದರಿ ತಂತ್ರವನ್ನು ಪರಿಚಯಿಸಿಕೊಂಡ ನಂತರ ತರಗತಿವಾರು ಮತ್ತು ವಿಷಯವಾರು ಕಲಿಯಲು ಮತ್ತು ಕಲಿಕೆಯನ್ನು ಮೌಲ್ಯಮಾಪನ ಮಾಡಲು ಅನುಸರಿಸಬಹುದಾದ ಚಟುವಟಿಕೆ ಮತ್ತು ಸಾಧನಗಳ ಕೆಲವು ಉದಾಹರಣೆಗಳನ್ನು ಈ ಕೆಳಗೆ ನೀಡಿದೆ.

ಕೆಲವು ಘಟಕಗಳಲ್ಲಿ ಬಳಸಬಹುದಾದ ಚಟುವಟಿಕೆ ಮತ್ತು ಸೂಚಿತ ಸಾಧನಗಳು

ಕ್ರ. ಸಂ.	ತರಗತಿ	ವಿಷಯ	ಘಟಕ	ಸೂಚಿತ ಚಟುವಟಿಕೆಗಳು	ಸೂಚಿತ ಸಾಧನಗಳು
01	4 ನೆಯ ತರಗತಿ	ಪರಿಸರ ಅಧ್ಯಯನ	2. ಸಸ್ಯ ಪ್ರಪಂಚ	01. ಶಾಲೆಯ ಆವರಣದಲ್ಲಿರುವ ಮರಗಿಡಗಳನ್ನು ವೀಕ್ಷಿಸಿ ಗಿಡ, ಮರ ಮತ್ತು ಬಳ್ಳಿಗಳಾಗಿ ವಿಂಗಡಿಸುವುದು (ಗುಂಪು ಚಟುವಟಿಕೆ)	ತಪಶೀಲು ಪಟ್ಟಿ / ಸಾಂದರ್ಭಿಕ ದಾಖಲೆ (ವಿಶೇಷ ಸಂದರ್ಭಗಳಲ್ಲಿ)
				02. ಮಕ್ಕಳಿಗೆ ತಮ್ಮ ಮನೆಯಲ್ಲಿ ತೆಂಗಿನ ಕರಟ ಅಥವಾ ಪ್ಲಾಸ್ಟಿಕ್ ಚೀಲದಲ್ಲಿ ಯಾವುದಾದರೂ ಒಂದು ಏಕದಳ ಅಥವಾ ದ್ವಿದಳ ಧಾನ್ಯದ ಗಿಡವನ್ನು ಬೆಳಸಿ ಅದನ್ನು ಪ್ರತಿ ಎರಡು ದಿನಕ್ಕೊಮ್ಮೆ ಗಮನಿಸಿ, ಬದಲಾವಣೆಗಳನ್ನು ದಾಖಲಿಸಿ. ಈ ಗಿಡವನ್ನು ಹತ್ತು ದಿನಗಳ ಕಾಲ ಗಮನಿಸಿ ವರದಿ ಸಿದ್ಧಪಡಿಸಿ (ಯೋಜನೆ)	ಅವಲೋಕನ ತಪಶೀಲು /ತಪಶೀಲು ಪಟ್ಟಿ/
				03. ಪಾತ್ರಾಭಿನಯ : ಮಕ್ಕಳು ಗಿಡ ಅಥವಾ ಮರದ ಒಂದೊಂದು ಭಾಗಗಳ ಪಾತ್ರವನ್ನು ಅಭಿನಯಿಸಿ ಆ ಪಾತ್ರದ ಮಹತ್ವ ವನ್ನು ತಿಳಿಸಲಿ.	ಕೆ.ಡಬ್ಲ್ಯೂ.ಎಲ್. ನಕ್ಷೆ /ವೀಕ್ಷಣಾ ತಪಶೀಲು /ಸಾಂದರ್ಭಿಕ ದಾಖಲೆ (ವಿಶೇಷ ಸಂದರ್ಭಗಳಲ್ಲಿ)
02	5ನೆಯ ತರಗತಿ	English	04. Tamarind	01. Let the children assume that they are the tamarind tree in this poem and individually reflect upon their feelings.	Observation schedule/ Check list
				02. Make the children into groups, let each group set a tune of their own to this poem and present it before the class.	Rating scale/ Check list/Anectodal Records
				03. Let the children write a brief essay on uses of tamarind tree.	Rating scale/ Rubrics/Anectodal Records
				04. Let the children draw and paint a picture or write a poem on deforestation and its effects.	
03	6ನೆಯ ತರಗತಿ	ಸಮಾಜ ವಿಜ್ಞಾನ	06. ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು	01. ಮಕ್ಕಳನ್ನು ಆರು ಗುಂಪುಗಳನ್ನಾಗಿ ಮಾಡಿ.ಪ್ರತಿಯೊಂದು ಗುಂಪೂ ಒಂದೊಂದು ಪ್ರಕಾರದ ಮೂಲಭೂತ ಹಕ್ಕುಗಳ ಕುರಿತು ಮಂಡನೆ ಮಾಡಲಿ (ಗುಂಪು ಚಟುವಟಿಕೆ)	ತಪಶೀಲು ಪಟ್ಟಿ / ಸಾಂದರ್ಭಿಕ ದಾಖಲೆ (ವಿಶೇಷ ಸಂದರ್ಭಗಳಲ್ಲಿ)
				02. ಮೂಲಭೂತ ಕರ್ತವ್ಯಗಳನ್ನು ಕುರಿತ ರಸಪ್ರಶ್ನೆ ನಡೆಸುವುದು. (ರಸಪ್ರಶ್ನೆ)	ಅವಲೋಕನ ತಪಶೀಲು
				03. ಮಕ್ಕಳು ತಮ್ಮ ಮನೆಯಲ್ಲಿ ಪಡೆದಿರುವ ಹಕ್ಕುಗಳ ಪಟ್ಟಿಮಾಡಲಿ. ಈ ಹಕ್ಕುಗಳ ಉಲ್ಲಂಘನೆಯಾಗುತ್ತಿರುವ ಸನ್ನಿವೇಶಗಳ ಪಟ್ಟಿ ತಯಾರಿಸಲಿ.	ಕೆ.ಡಬ್ಲ್ಯೂ.ಎಲ್. ನಕ್ಷೆ /ತಪಶೀಲು ಪಟ್ಟಿ /ಸಾಂದರ್ಭಿಕ ದಾಖಲೆ (ವಿಶೇಷ ಸಂದರ್ಭಗಳಲ್ಲಿ)

04	7ನೆಯ ತರಗತಿ	ವಿಜ್ಞಾನ	4.ಶಬ್ದ	01. ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ. ಪ್ರತಿಗುಂಪೂ "ಶಬ್ದ ಹೇಗೆ ಉಂಟಾಗುತ್ತದೆ" ಎನ್ನುವ ಬಗ್ಗೆ ಯಾವುದಾದರೂ ಒಂದು ಸರಳ ಪ್ರಯೋಗದ ಬಗ್ಗೆ ಚರ್ಚಿಸಿ,ಸರಳ ಪ್ರಯೋಗದ ಮಂಡನೆಯನ್ನು ಮಾಡಲಿ.	ಕೆ.ಡಬ್ಲ್ಯೂ.ಎಲ್. ನಕ್ಷೆ / ಅವಲೋಕನ ತಪಶೀಲು /ಸಾಂದರ್ಭಿಕ ದಾಖಲೆ
				02. "ಪ್ರಪಂಚದಲ್ಲಿ ಶಬ್ದವೇ ಇಲ್ಲದಿದ್ದಲ್ಲಿ ಏನಾಗುತ್ತದೆ?" ಎನ್ನುವ ವಿಷಯದ ಬಗ್ಗೆ ಪ್ರತಿ ವಿದ್ಯಾರ್ಥಿಯೂ ಚಿಂತಿಸಿ ಅಭಿಪ್ರಾಯ ವ್ಯಕ್ತಪಡಿಸಲಿ.	ಪ್ರತಿಕ್ರಿಯೆಗಳ ವಿಶ್ಲೇಷಣೆ
				03.ಮಕ್ಕಳು ಬೆಳಗ್ಗಿನಿಂದ ಸಂಜೆಯವರೆಗೆ ಕೇಳಿದ ಸಾಧ್ಯವಾದ ಎಲ್ಲ ಧ್ವನಿಗಳನ್ನೂ ಆಲಿಸಿ ಅವುಗಳನ್ನು ಶಬ್ದ ಮತ್ತು ಗದ್ದಲಗಳನ್ನಾಗಿ ವಿಂಗಡಿಸಿ ಪಟ್ಟಿ ಮಾಡಲಿ.	ದರ್ಜಾಮಾಪನ
				04. ಆ ಊರಿನ ಜಾತ್ರೆ/ಹಬ್ಬ ಇಲ್ಲೇ ಮದುವೆ ಸಮಾರಂಭಗಳಲ್ಲಿ ಬಳಸುವ ಸಂಗೀತ ವಾದ್ಯಗಳನ್ನು ಪಟ್ಟಿಮಾಡಿ, ಅವುಗಳನ್ನು ತಂತಿ, ಮರ್ದನ ಮತ್ತು ಕಂಪನ ವಾದ್ಯಗಳಾಗಿ ವಿಂಗಡಿಸಲಿ.	ತಪಶೀಲು ಪಟ್ಟಿ
05	8ನೆಯ ತರಗತಿ	ಗಣಿತ	02. ವರ್ಗ,ವರ್ಗ ಮೂಲಗಳು, ಪೂರ್ಣ ಘನ ಮತ್ತು ಘನಮೂಲಗಳು	01. ಮಕ್ಕಳು ಸಾಲಿನಲ್ಲಿ ನಿಂತು ಅಥವಾ ಕುಳಿತು 1 ರಿಂದ ಸಂಖ್ಯೆಗಳನ್ನು ಹೇಳುತ್ತಾ ಹೋಗಲಿ; ಯಾವ ಮಗುವಿಗೆ ವರ್ಗ ಸಂಖ್ಯೆಯು ಬರುತ್ತದೆಯೋ ಆ ಮಗು ಒಮ್ಮೆ ಚಪ್ಪಾಳೆಯನ್ನು ತಟ್ಟಲಿ.	ತಪಶೀಲು ಪಟ್ಟಿ
				02. ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿಗೂ ಕೆಲವು ಸಂಖ್ಯೆಗಳನ್ನು ಕೊಡಿ. ಅವರು ಆ ಸಂಖ್ಯೆಗಳನ್ನು ಪೂರ್ಣ ವರ್ಗ ಸಂಖ್ಯೆ, ಪೂರ್ಣ ಘನ ಸಂಖ್ಯೆ ಮತ್ತು ಅಪೂರ್ಣ ವರ್ಗ ಅಥವಾ ಅಪೂರ್ಣ ಘನ ಸಂಖ್ಯೆಗಳಾಗಿ ವಿಂಗಡಿಸಲಿ.	ಅವಲೋಕನಾ ತಪಶೀಲು
				03. ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ. ಪ್ರತಿಗುಂಪಿಗೂ ಕೆಲವು ಅಭ್ಯಾಸದ ಲೆಕ್ಕಗಳನ್ನು ಕೊಡಿ. ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಆ ಲೆಕ್ಕಗಳನ್ನು ಬಿಡಿಸಲಿ.	ಅವಲೋಕನಾ ತಪಶೀಲು
				04. ನಿತ್ಯಜೀವನದಲ್ಲಿ ವರ್ಗ ಮತ್ತು ವರ್ಗಮೂಲ ಸಂಖ್ಯೆಗಳ ಉಪಯೋಗವನ್ನು ಗುರುತಿಸಿ ಅವುಗಳ ಪಟ್ಟಿ ಮಾಡಲಿ.	ಘಟಕ ಪರೀಕ್ಷೆ
06	9ನೆಯ ತರಗತಿ	ಕನ್ನಡ	02.ಪ್ರಾಮಾಣಿಕತೆ	01. ಈ ಪಾಠವನ್ನು ಆಧರಿಸಿ ಮಕ್ಕಳು ಒಂದು ಪಾತ್ರಾಭಿನಯವನ್ನು ಮಾಡಲಿ (ನಾಟಕ)	ಅವಲೋಕನಾ ತಪಶೀಲು
				02. ಚರ್ಚಾಸ್ಪರ್ಧೆ: ಈ ಪಾಠವನ್ನು ಆಧರಿಸಿ "ನಮಗೆ ಹೆಚ್ಚು ತೊಂದರೆಯಾಗುತ್ತಿರುವುದು ನಮ್ಮವರಿಂದಲೇ ಅಥವಾ ಅನ್ಯರಿಂದಲೇ" ಎನ್ನುವ ವಿಷಯದ ಬಗ್ಗೆ ಚರ್ಚೆಯನ್ನು ಏರ್ಪಡಿಸಲಿ.	ತಪಶೀಲು ಪಟ್ಟಿ
				03. ಸಾರಾ ಅಬೂಬಕ್ಕರ್ ಅವರ ಕೃತಿಗಳಬಗ್ಗೆ ಒಂದು ಯೋಜನೆಯನ್ನು ತಯಾರಿಸಿ.	ದರ್ಜಾಮಾಪನ

ಸೂಚನೆ : ವಿದ್ಯಾರ್ಥಿಗಳನ್ನು ಚಟುವಟಿಕೆಗೆ ತೊಡಗಿಸುವ ಮೊದಲು ಪರಿಕಲ್ಪನೆಗೆ ಸಂಬಂಧಿಸಿದಂತೆ ಸೂಚನೆಗಳನ್ನು, ಹಿನ್ನೆಲೆಯನ್ನು ಹಾಗೂ ನೀಡಬಹುದಾದ ಇತರೆ ಸಲಹೆಗಳನ್ನು ಕೊಟ್ಟು ತರಗತಿ ಪ್ರಕ್ರಿಯೆಯನ್ನು ನಿರ್ದಿಷ್ಟಗೊಳಿಸಿರಿ.